ಸೇತುವೆ ನಿರ್ಮಾಣ

200(397) ಶ್ರೀ ಕುಮಾರಸ್ವಾಮಿ ಕೆ ಜಿ:(ಶಿವಮೊಗ್ಗ ಗ್ರಾಮಾಂತರ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2008–09ರ ಆಯವ್ಯಯದನ್ವಯ ಶಿವಮೊಗ್ಗ ತಾಲ್ಲೂಕು ಹೊಳಲೂರು ಹೋಬಳಿ ಮತ್ತು ಭದ್ರಾವತಿ ತಾಲ್ಲೂಕು ಹೊಳಲೂರು ಹೋಬಳಿ ಮತ್ತು ಭದ್ರಾವತಿ ತಾಲ್ಲೂಕು ಹೊಳೆಹೊನ್ನೂರು ಸಂಪರ್ಕಿಸುವ ತುಂಗಭದ್ರ ನದಿ ಸೇತುವೆ ನಿರ್ಮಾಣ ಕಾಮಗಾರಿಯನ್ನು ಎಂದಿನಿಂದ ಪ್ರಾರಂಭಿಸಲಾಗುವುದು (ಸಂಪರ್ಕ ರಸ್ತೆಗಳನ್ನು ಉನ್ನತೀಕರಿಸುವ ಬಗ್ಗೆ ಹೊರಡಿಸಿದ ಅಧಿಸೂಚನೆ ಪ್ರತಿ ಸಹಿತ ವಿವರ ಒದಗಿಸುವುದು);

ಆ) ಈ ಕಾಮಗಾರಿಗೆ ನಿಗದಿಪಡಿಸಿದ ಅಂದಾಜು ಮೊತ್ತವೆಷ್ಟು (ವಿವರ ನೀಡುವುದು)?

ಶ್ರೀ ಸಿ.ಎಂ.ಉದಾಸಿ(ಲೋಕೋಪಯೋಗಿ ಸಚಿವರು):

ಅ) ಶಿವಮೊಗ್ಗ ತಾಲ್ಲೂಕು ಹೊಳಲೂರು ಹೋಬಳಿ ಮತ್ತು ಭದ್ರಾವತಿ ತಾಲ್ಲೂಕು ಹೊಳೆಹೊನ್ನೂರು ಸಂಪರ್ಕಿಸುವ ತುಂಗಭದ್ರ ನದಿ ಸೇತುವೆ ನಿರ್ಮಾಣ ಕಾಮಗಾರಿಯ ರೂ.2826.00 ಲಕ್ಷಗಳ ಅಂದಾಜು ತಯಾರಿಸಲಾಗಿದ್ದು, ಅನುದಾನ ಲಭ್ಯತೆ ಮೇರೆಗೆ ತೆಗೆದುಕೊಳ್ಳಲಾಗುವುದು.

ಶಿವಮೊಗ್ಗ ತಾಲ್ಲೂಕು, ಗೋಪಗಾನಹಳ್ಳಿ ಹತ್ತಿರದಿಂದ ಪ್ರಾರಂಭವಾಗಿ ಹಾಡೋನಹಳ್ಳಿ ಮಾರ್ಗವಾಗಿ ಭದ್ರಾವತಿ ತಾಲ್ಲೂಕು, ಅನವೇರಿಯನ್ನು ಸಂಪರ್ಕಿಸುವ ರಸ್ತೆಯನ್ನು ಜಿಲ್ಲಾ ಮುಖ್ಯ ರಸ್ತೆಯನ್ನಾಗಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಕಾಮಗಾರಿ ಅಂದಾಜು ಮೊತ್ತ ರೂ.2826.00 ಲಕ್ಷಗಳಾಗಿರುತ್ತದೆ.

ಕೀಟ ನಾಶಕ, ಕಳೆನಾಶಕ ಔಷಧಿ ಸರಬರಾಜು